ವಿಷನ್
(ಧ್ಯೇಯ ದೃಷ್ಟಿ)

2030

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಕರ್ನಾಟಕ ಸರ್ಕಾರ

ನವೆಂಬರ್ 2020

ಉಲ್ಲೇಖ: KSTA, Government of Karnataka, 2020.
VISION - 2030.
Karnataka Science and
Technology Academy, Bengaluru, pp. 10

ಕವಿತಂಅ ಕಾರ್ಯಕಾರಿ ಸಮಿತಿ 2020–23

ಪ್ರೊ. ಎಸ್. ಅಯ್ಯಪ್ಪನ್, ಅಧ್ಯಕ್ಷರು

ಡಾ. ಇ. ವಿ. ರಮಣ ರೆಡ್ಡಿ, ಸದಸ್ಯರು

ಡಾ. ಪ್ರಕಾಶ್ ಎಂ. ಸೊಬರದ್, ಸದಸ್ಯ ಕಾರ್ಯದರ್ಶಿ

ಪ್ರೊ. ಎಚ್. ಎ. ರಂಗನಾಥ್, ಸದಸ್ಯರು

ಪ್ರೊ. ಕೆ. ಬಾಲವೀರ ರೆಡ್ಡಿ, ಸದಸ್ಯರು

ಪ್ರೊ. ಬಿ. ಜಿ. ಮೂಲಿಮನಿ, ಸದಸ್ಯರು

ಪ್ರೊ. ಎಸ್. ಕೆ. ಸೈದಾಪುರ್, ಸದಸ್ಯರು

ಪ್ರೊ. ವಿ. ಜಿ. ತಲವಾರ್, ಸದಸ್ಯರು

ಪ್ರೊ. ಎ. ಎಚ್. ರಾಜಾಸಾಬ್, ಸದಸ್ಯರು

ಡಾ. ಎ. ಇ. ಏಕನಾಥ್, ಸದಸ್ಯರು

ಡಾ. ಡಿ. ಚನ್ನೇಗೌಡ, ಸದಸ್ಯರು

ಪ್ರೊ. ಕತ್ರೆ ಶಕುಂತಲಾ, ವಿಶೇಷ ಆಹ್ವಾನಿತರು

ಪ್ರೊ. ಹೆಚ್. ಎಸ್. ಸಾವಿತ್ರಿ, ವಿಶೇಷ ಆಹ್ವಾನಿತರು

ಡಾ. ಎ. ಎಂ. ರಮೇಶ್, ಸಂಚಾಲಕರು

ಪ್ರಕಟಣೆ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ತೋಟಗಾರಿಕಾ ಕಾಲೇಜು ಪ್ರವೇಶದ್ವಾರ, ಜಿಕೆವಿಕೆ ಆವರಣ

ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ,

ವಿದ್ಯಾರಣ್ಯಪುರ ಅಂಚೆ, ಬೆಂಗಳೂರು - 560097

ದೂರವಾಣಿ: 080-2972 1550; ಇಮೇಲ್: ksta.gok@gmail.com

ವೆಬ್‌ತಾಣ:www.kstacademy.in

ಡಾ. ಸಿ. ಎನ್. ಅಶ್ವಥ್ ನಾರಾಯಣ
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು
ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು, ಕರ್ನಾಟಕ ಸರ್ಕಾರ

ಕೊಠಡಿ ಸಂಖ್ಯೆ : 242–243
2ನೇ ಮಹಡಿ, ವಿಕಾಸ ಸೌಧ
ಬೆಂಗಳೂರು – 560 001
ದೂ: 080–22258965
080–22034647

ನಂ. DCM/HrEdn.IT&BT.S&T.SD/3659/2021

ದಿನಾಂಕ: 13-08-2020

<u>ಸಂದೇಶ</u>

ಕರ್ನಾಟಕದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ರಾಜಾಶ್ರಯದ ಪರಂಪರೆಯೊಂದಿಗೆ ಉತ್ತಮ ಗುಣಮಟ್ಟದ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳೆರಡೂ ಇರುವುದರಿಂದ, ಶಿಕ್ಷಣ ಮತ್ತು ವೈಜ್ಞಾನಿಕ ಅನ್ವೇಷಣೆಗಳಲ್ಲಿ ರಾಜ್ಯವು ಮುಂದಾಳತ್ವವನ್ನು ಪಡೆದಿದೆ. ರಾಜ್ಯವು ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಉದ್ಯಮಗಳಲ್ಲಿ ಮುಂಚೂಣಿಯಲ್ಲಿದ್ದು, ಬೆಂಗಳೂರು ವಿಜ್ಞಾನ ನಗರವೆಂದು ಗುರುತಿಸಿಕೊಂಡಿದೆ. ಹಲವಾರು ಶೈಕ್ಷಣಿಕ ಸಂಸ್ಥೆಗಳಲ್ಲಿ ವೈವಿಧ್ಯಮಯವಾದ ಪ್ರತಿಭೆಗಳೊಂದಿಗೆ ಉದ್ಯಮಶೀಲತೆಯ ಪರಿಸರವೂ ಸಹ ಇರುವುದರಿಂದ ಆವಿಷ್ಕಾರಗಳಿಗೆ ಪೂರಕವಾಗಿದೆ.

ಅನ್ಯ ರಾಜ್ಯಗಳಂತೆ ಕರ್ನಾಟಕದಲ್ಲೂ ಸಹ ವೈಶಿಷ್ಟ್ಯಪೂರ್ಣವಾದ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ನೀರು, ಅರಣ್ಯಗಳು, ವನ್ಯಜೀವಿ, ಕರಾವಳಿ, ಗಣಿಗಳು ಮುಂತಾದವುಗಳಿವೆ. ಪ್ರಮುಖ ಕ್ಷೇತ್ರಗಳಾದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಉದ್ಯಮ, ಕೃಷಿ, ಸಂವಹನ, ಇತ್ಯಾದಿಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಮಾಹಿತಿಯನ್ನು ಪಡೆದುಕೊಳ್ಳುವುದರೊಂದಿಗೆ ಜ್ಞಾನದ ಸೃಜನೆಯೂ ಸಹ ಆಗುತ್ತಿದೆ. ಗುಡಿ

ಕೈಗಾರಿಕೆಯಿಂದ ಕಾರ್ಪೋರೇಟ್ ಉದ್ಯಮದವರೆಗೆ ಬಹು ಭಾಧ್ಯಸ್ಥರನ್ನು ಹೊಂದಿರುವುದರಿಂದ ಆರ್ಥಿಕ ವ್ಯಾಪ್ತಿಯು ವೈವಿಧ್ಯಮಯವಾಗಿದ್ದು, ಇತರರಿಗಿಂತ ಭಿನ್ನವಾಗಿದೆ.

"ಸಮಾಜಕ್ಕಾಗಿ ವಿಜ್ಞಾನ" ಎಂಬುದಕ್ಕೆ ಪೂರಕವಾಗಿವಿಜ್ಞಾನ ಮತ್ತು ತಂತ್ರಜ್ಞಾನದ ಪರಿಕಲ್ಪನೆಗಳು ಮತ್ತು ಸಾಧನಗಳು ಆರ್ಥಿಕರಂಗದ ಎಲ್ಲಾ ವಲಯಗಳಲ್ಲೂ ಹಾಸುಹೊಕ್ಕು, ಹೆಚ್ಚಿನ ಸಂಪತ್ತು ವೃದ್ಧಿಗೆ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಅನುವಾಗಿದೆ. ಕೋವಿಡ್ ಸಾಂಕ್ರಾಮಿಕವು ಜಾಗತಿಕವಾಗಿ ಆರ್ಥಿಕ ರಂಗದ ವಲಯಗಳ ಮೇಲೆ ಪ್ರಭಾವವನ್ನು ಬೀರುತ್ತಿರುವುದರಿಂದ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳ ಹೆಚ್ಚಿನ ಅಗತ್ಯ ಮತ್ತು ಸಾಮರ್ಥ್ಯವನ್ನು ಮುನ್ನೆಲೆಗೆ ತಂದಿದೆ.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು "ವಿಷನ್ – 2030" ದಾಖಲೆಯನ್ನು ಕಾರ್ಯಕ್ರಮಗಳ ಯೋಜನೆಗೆ ಆಕರ ದಾಖಲೆಯಾಗಿ ಮತ್ತು ಮಾರ್ಗದರ್ಶಿಯಾಗಿ ಬಳಸಿಕೊಳ್ಳಲು ಅನುವಾಗುವಂತೆ ತಯಾರಿಸಿರುವುದು ಸಂತಸದ ವಿಷಯವಾಗಿದೆ. ಅದಕ್ಕಾಗಿ ಅಕಾಡೆಮಿ ತಂಡಕ್ಕೆ ಅಭಿನಂದನೆಗಳು. ಈ ದಾಖಲೆಯು ಮೂರು ಸ್ತಂಭಗಳಾದ ದೂರದೃಷ್ಠಿ, ಆವಿಷ್ಕಾರಗಳು ಮತ್ತು ಪಾಲುದಾರಿಕೆಗಳೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಮ್ಮ ಹೆಜ್ಜೆ ಗುರುತುಗಳನ್ನು ವಿಶ್ಲೇಷಿಸಲು ಹಾಗೂ ಭವಿಷ್ಯದ ಬದಲಾವಣೆಗಳನ್ನು ಅಂದಾಜಿಸಲು ಮುನ್ಸೂಚಕವಾಗಲಿದೆಯೆಂದು ನಾನು ಭಾವಿಸುತ್ತೇನೆ.

(ಡಾ. ಸಿ. ಎನ್. ಅಶ್ವಥ್ ನಾರಾಯಣ)

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಕರ್ನಾಟಕ ಸರ್ಕಾರ

ವಿಷನ್–2030

(ಧ್ಯೇಯ ದೃಷ್ಟಿ)

ಪೀಠಿಕೆ

ವಿಜ್ಞಾನ ಮತ್ತು ತಂತ್ರಜ್ಞಾನಗಳು ನಮ್ಮ ದೈನಂದಿನ ಜೀವನ ಹಾಗೂ ಆರ್ಥಿಕತೆಯ ಪ್ರತಿ ರಂಗದ ಪ್ರಗತಿಯ ಮೇಲೆ ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಭಾರತೀಯ ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರುಗಳು ಜಾಗತಿಕ ಮನ್ನಣೆಯನ್ನುಗಳಿಸಿದ್ದಾರೆ. ಆದರೆ, ಸಮಾಜದಲ್ಲಿ ವಿಜ್ಞಾನವನ್ನು ಬಹುತೇಕ ಬಾಹ್ಯ ವಿಷಯವೆಂದು ಪರಿಗಣಿಸಿ, ಕೇವಲ ಅಧ್ಯಯನದ ಅಥವಾ ವೃತ್ತಿಯ ವಿಷಯವೆಂಬಂತೆ ಬಿಂಬಿಸಲಾಗಿದೆ. ನಮ್ಮ ಜೀವನವನ್ನು ಉತ್ತಮಗೊಳಿಸಿರುವ ಅಗಾಧ ಪ್ರಮಾಣದ ಪರಿಕರಗಳು ಮತ್ತು ಅನ್ವಯಿಕಗಳ ಸಾಕ್ಷಾತ್ಕಾರವನ್ನು ಮನಗಂಡು, ಮೆಚ್ಚುಗೆಯನ್ನು ವ್ಯಕ್ತಪಡಿಸುವುದು ಸಮಾಜದಲ್ಲಿ ಸಾಕ್ಷರರಿಗೆ ಮಾತ್ರ ಸೀಮಿತವಾಗಿದೆ. ಆಧುನಿಕ ಭಾರತವು ಬಂಡವಾಳ ಹೂಡಿಕೆಯನ್ನು ಸಂಶೋಧನಾ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಅಕಾಡೆಮಿಗಳ ಸ್ಥಾಪನೆಗೆ ಮಾಡಿರುವುದಲ್ಲದೇ, ಸರ್ಕಾರೇತರ ಮತ್ತು ಕಾರ್ಪೋರೇಟ್ ವಲಯಗಳಪ್ರಯತ್ನಗಳೂ ಸಹ ವಿಜ್ಞಾನ ಸಾಕ್ಷರತೆ, ಜಾಗೃತಿ ಮತ್ತು ಸಂವಹನವನ್ನು ಉತ್ತಮಗೊಳಿಸಲು ಬಹಳಷ್ಟು ಸಹಕಾರಿಯಾಗಿರುವ ಬಗ್ಗೆ ಹೆಚ್ಚಿನ ಪ್ರಚಾರವನ್ನು ನೀಡಬೇಕಾಗಿದೆ.

ಕರ್ನಾಟಕವು ವೈಜ್ಞಾನಿಕ ಸಂಸ್ಥೆಗಳ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದ್ದು, ಅವುಗಳಲ್ಲಿ 2005 ರಿಂದ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಸಹ ಒಂದಾಗಿದೆ. ವಿಜ್ಞಾನ ರಾಜಧಾನಿಯಾಗಿರುವ ಬೆಂಗಳೂರು, ಹೊಸ ವಿಜ್ಞಾನಗಳು ಮತ್ತು ಆವಿಷ್ಕಾರಗಳ ತೊಟ್ಟಿಲಾಗಿದೆಯಲ್ಲದೇ, ಶೈಕ್ಷಣಿಕ ತಾಣವೂ ಆಗಿದ್ದು, ಅಕಾಡೆಮಿಯು ಮುಂದಿನ ದಶಕವನ್ನು ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳ ಸ್ವೀಕಾರ, ಪ್ರಶಾಂಸೆ ಮತ್ತು ಅಳವಡಿಕೆಗೆ ಸೇರಿದ್ದೆಂದು ಭಾವಿಸಿದೆ. ಸಂಪನ್ಮೂಲ ಸಾಮರ್ಥ್ಯ ಮತ್ತು ರಾಜ್ಯದ ಜನತೆಯ ಆಶೋತ್ತರಗಳನ್ನು ಪರಿಗಣನೆಗೆ ತೆಗೆದುಕೊಂಡು ಒಂದು ದಶಕದ ಅವಧಿಗೆ ಈ ವಿಷನ್–2030 (ಧ್ಯೇಯ ದೃಷ್ಟಿ) ದಾಖಲೆಯನ್ನು ತಯಾರಿಸಲಾಗಿದೆ.

ಸಂಕ್ಷಿಪ್ತ ಪರಿಚಯ

ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ 6 ಕೋಟಿ ಜನರು ವಾಸಿಸುತ್ತಿದ್ದು, ಶೇ 60ಕ್ಕಿಂತ ಹೆಚ್ಚು ಜನ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿದ್ದಾರೆ. ಕರಾವಳಿ ವಲಯ, ಪಶ್ಚಿಮ ಘಟ್ಟಗಳು ಮತ್ತು ದಕ್ಷಿಣ ಪ್ರಸ್ತಭೂಮಿಯೆಂಬ ಮೂರು ಪ್ರತ್ಯೇಕ ಭೌಗೋಳಿಕ ಪ್ರದೇಶಗಳಿರುವ ನಮ್ಮ ರಾಜ್ಯವು ಜೀವ ವೈವಿಧ್ಯತೆಯ ತಾಣವಾಗಿದೆ.ಒಂದು ಲಕ್ಷಕ್ಕೂ ಹೆಚ್ಚು ಪ್ರಭೇದಗಳಿವೆ ಎಂದುಅಂದಾಜಿಸಲಾಗಿದ್ದು, ಐದು ರಾಷ್ಟ್ರೀಯ ಉದ್ಯಾನವನಗಳು ಮತ್ತು 24 ವನ್ಯಜೀವಿ ಅಭಯಾರಣ್ಯಗಳಿವೆ. ರಾಜ್ಯದ ಒಟ್ಟು 191.79 ಚದರ ಕಿ.ಮೀ.ಭೂ ಪ್ರದೇಶದಲ್ಲಿ ಶೇ. 22.6ರಷ್ಟು ವಿಸ್ತೀರ್ಣ ಅರಣ್ಯ ಪ್ರದೇಶವಾಗಿದ್ದು, ಭಾರತದ ಶೇ. 6ಕ್ಕಿಂತ ಹೆಚ್ಚು ಅರಣ್ಯ ಸಂಪನ್ಮೂಲ ರಾಜ್ಯದಲ್ಲಿದೆ. ಮಳೆ ಆಶ್ರಿತ ಪ್ರದೇಶವೇ ಪ್ರಮುಖವಾಗಿರುವ ರಾಜ್ಯವು ದೇಶದ ಆಹಾರ ಕಣಜಕ್ಕೆ ಶೇ. 5ರಷ್ಟು ಕೊಡುಗೆಯನ್ನು ನೀಡುತ್ತಿದ್ದು, ಪ್ರಾಥಮಿಕ ವಲಯದಲ್ಲಿ ತೋಟಗಾರಿಕೆ ಮತ್ತು ಹೈನುಗಾರಿಕೆಗೆ ಹೆಸರುವಾಸಿಯಾಗಿದೆ.

ಕರ್ನಾಟಕ ರಾಜ್ಯವು ಶೇ. 75ಕ್ಕಿಂತ ಹೆಚ್ಚು ಸಾಕ್ಷರತೆ ಹಾಗೂ 973 ಲಿಂಗಾನುಪಾತದೊಂದಿಗೆ ದೇಶದ ಸರಾಸರಿಗಿಂತ ಹೆಚ್ಚಾಗಿದ್ದು, ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ರಾಜ್ಯಗಳಲ್ಲೊಂದಾಗಿದೆ. ರಾಜ್ಯದ ಒಟ್ಟು ದೇಶಿಯ ಉತ್ಪನ್ನ ರೂ. 17 ಲಕ್ಷ ಕೋಟಿಗಳು ಮತ್ತು ವಾರ್ಷಿಕ ಬೆಳವಣಿಗೆ ಸುಮಾರು ಶೇ. 7 ರಷ್ಟು ಹಾಗೂ ತಲಾವಾರು ಆದಾಯ ರೂ. 2,31,246/- ಗಳೊಂದಿಗೆ ದೇಶದಲ್ಲೇನಾಲ್ಕನೇ ಅತಿ ಹೆಚ್ಚು ಆದಾಯವಾಗಿ, ದೇಶದ ಒಟ್ಟು ದೇಶೀಯ ಆದಾಯದ ಶೇ. 6 ರಷ್ಟಿದೆ. ರಾಜ್ಯದಲ್ಲಿ ಸ್ವಾತಂತ್ರ್ಯ ಪೂರ್ವದಿಂದ ಕೈಗಾರಿಕೆಗಳ ಪರಂಪರೆಯಿದ್ದು, ಉದಾಹರಣೆಗೆ – ಕಬ್ಬಿಣ & ಉಕ್ಕು, ಗಂಧ ಇತ್ಯಾದಿ, ಮೋಟಾರು ವಾಹನ, ಕೃಷಿ, ವೈಮಾಂತರಿಕ್ಷ, ಜವಳಿ&ಉಡುಪು, ಜೈವಿಕ ತಂತ್ರಜ್ಞಾನ, ಬೃಹತ್ ಕೈಗಾರಿಕೆಗಳಲ್ಲದೇ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಹಾರ ಸಂಸ್ಕರಣೆ ಮತ್ತು ವೈಮಾಂತರಿಕ್ಷ ಕ್ಷೇತ್ರಗಳ ವಿಶೇಷ ಆರ್ಥಿಕ ವಲಯಗಳಿವೆ. ಭಾರತದ ಮಾಹಿತಿ ತಂತ್ರಜ್ಞಾನ ತಾಣವಾಗಿರುವ ಕರ್ನಾಟಕದಲ್ಲಿ ಫಾರ್ಚುನ್ ಗ್ಲೋಬಲ್-500 ಕಂಪನಿಗಳಲ್ಲಿ 400ಕ್ಕೂ ಹೆಚ್ಚು ಕಂಪನಿಗಳು,ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಬೆಂಗಳೂರಿನಲ್ಲಿರುವ ಕಂಪನಿಗಳಿಗೆ ಹೊರಗುತ್ತಿಗೆಯನ್ನು ನೀಡುತ್ತಿವೆ. ಕೃಷಿ, ಕೈಗಾರಿಕೆ ಮತ್ತು ಸೇವೆಗಳು ಶೇ. 10.97, ಶೇ. 22.84 ಮತ್ತು ಶೇ. 66.19ರಷ್ಟನ್ನು ಅನುಕ್ರಮವಾಗಿ ರಾಜ್ಯದ ನಿವ್ವಳ ದೇಶೀಯ ಉತ್ಪನ್ನಕ್ಕೆ (SGDP) ಕೊಡುಗೆಯನ್ನು ನೀಡುತ್ತಿವೆ.

ರಾಜ್ಯದಲ್ಲಿ ಪ್ರೌಢ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ, 10,000 ಪ್ರೌಢಶಾಲೆಗಳಲ್ಲಿ 15 ಲಕ್ಷ ವಿದ್ಯಾರ್ಥಿಗಳು ಮತ್ತು ಒಂದು ಲಕ್ಷ ಶಿಕ್ಷಕರು: 43 ವಿಶ್ವವಿದ್ಯಾನಿಲಯಗಳು, 3,400 ಪ್ರಥಮ ದರ್ಜೆ ಕಾಲೇಜುಗಳು, 192 ಇಂಜಿನಿಯರಿಂಗ್ ಕಾಲೇಜುಗಳು, 42 ವೈದ್ಯಕೀಯ ಕಾಲೇಜುಗಳು, 38 ದಂತ ವೈದ್ಯ ಕಾಲೇಜುಗಳು ಮತ್ತು 248 ಪಾಲಿಟೆಕ್ನಿಕ್‌ಗಳಲ್ಲಿ ಸುಮಾರು 20 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲದೇ, ಕಾರ್ಪೋರೇಟ್ ವಲಯದ 400 ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ್ರಗಳು ರಾಜ್ಯದಲ್ಲಿದ್ದು, ಅವು ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರದ (Science, Technology & Innovation-STI) ಕೊಡುಗೆ ಹಾಗೂ ಸಾಮರ್ಥ್ಯದ ಸೂಚಕವಾಗಿವೆ.

ಪ್ರಸ್ತುತ ಪರಿಸ್ಥಿತಿ

ಬಹುತೇಕ ಪ್ರಕ್ಷೇಪಗಳ ಅಂದಾಜಿನ ಪ್ರಕಾರ (Projection) 2030ರ ವೇಳೆಗೆ ವಿಶ್ವದಲ್ಲಿ ಜನಸಂಖ್ಯೆ, ಹವಾಮಾನ, ನೈಸರ್ಗಿಕ ಸಂಪನ್ಮೂಲ, ಆಹಾರ ವ್ಯವಸ್ಥೆ, ಇಂಧನ & ತ್ಯಾಜ್ಯ ನಿರ್ವಹಣೆ, ಡಿಜಿಟಲ್ ಆರ್ಥಿಕತೆ ಮತ್ತು ಸಂವಹನಗಳಲ್ಲಿ ಬಹಳಷ್ಟು ಬದಲಾವಣೆಗಳಾಗಲಿದ್ದು, 2020ರ ಅಭೂತಪೂರ್ವ ಕೋವಿಡ್-19 ಸಾಂಕ್ರಾಮಿಕ ರೋಗವು ಮತ್ತಷ್ಟು ತೀವ್ರಗೊಳಿಸಲಿದೆ.ಇಂದುಅತಿ ಹೆಚ್ಚು ಪರಸ್ಪರ ಜಾಗತಿಕ ಅವಲಂಬನೆ ಅವಶ್ಯವಿದ್ದು,ಇದಕ್ಕೆ ಭಾರತವು ಹೊರತಾಗಿರುವುದಿಲ್ಲ. ಯಾವುದೇ ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ, ಸಾಮಾನ್ಯವಾಗಿ ಬಳಸುವ ಸೂಚಕಗಳೆಂದರೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಸರ್ಕಾರದ ಖರ್ಚು ವೆಚ್ಚ, ಒಂದು ದಶಲಕ್ಷ ಜನಸಂಖ್ಯೆಯಲ್ಲಿ ಸಂಶೋಧಕರ ಸಂಖ್ಯೆ (FTE – Full Time Equivalent: ಪೂರ್ಣಾವಧಿಗೆ ಸರಿಸಮನಾಗಿ), ಪ್ರಕಟಣೆಗಳು ಮತ್ತು ಪೇಟೆಂಟ್‌ಗಳ ಸಂಖ್ಯೆ ಆಗಿವೆ. ಕೇಂದ್ರದ ಮಟ್ಟದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಸರ್ಕಾರದ ಬಂಡವಾಳ ಹೂಡಿಕೆ ವಾರ್ಷಿಕವಾಗಿ ನಿವ್ವಳ ದೇಶೀಯ ಉತ್ಪನ್ನದಲ್ಲಿ ಶೇ. 0.7ರಷ್ಟಿದ್ದು, ಪೂರ್ಣ ಪ್ರಮಾಣದ ಸಂಶೋಧಕರು 5.52 ಲಕ್ಷ, ಅವರಲ್ಲಿ ಶೇ. 19ರಷ್ಟು ಮಹಿಳಾ ಸಂಶೋಧಕರು, ಅಂದರೆ ದೇಶದ ಪ್ರತಿ ದಶಲಕ್ಷ ಜನಸಂಖ್ಯೆಗೆ 255 ಸಂಶೋಧಕರು ಕಾರ್ಯನಿರ್ವಹಿಸುತ್ತಿದ್ದು ಒಟ್ಟು 3,41,818 ರಷ್ಟಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ 3.74 ಕೋಟಿಗಳಾಗಿದ್ದು, ಒಟ್ಟು ದಾಖಲಾತಿ ಅನುಪಾತವು (GER) ಶೇ. 26.3ರಷ್ಟು ಮತ್ತು

ಅಧ್ಯಾಪಕರ ಸಂಖ್ಯೆ 14.16 ಲಕ್ಷಗಳು ಹಾಗೂ ವಾರ್ಷಿಕವಾಗಿ ದಾಖಲಾಗುವ 40,823 ಡಾಕ್ಟರೇಟ್ ವಿದ್ಯಾರ್ಥಿಗಳೊಂದಿಗೆ ಭಾರತವು ವಿಶ್ವದಲ್ಲಿ 3ನೇ ಸ್ಥಾನದಲ್ಲಿದೆ. ಪ್ರತಿ ವರ್ಷ ಪ್ರಕಟವಾಗುವ ವೈಜ್ಞಾನಿಕ ಲೇಖನಗಳ ಸಂಖ್ಯೆ 1,35,788 ಗಳಾಗಿದ್ದು, ಶೇ. 10 ರಷ್ಟು ವಾರ್ಷಿಕ ಬೆಳವಣಿಗೆಯೊಂದಿಗೆ ಭಾರತವು ವಿಶ್ವದಲ್ಲಿ 10ನೇ ಸ್ಥಾನದಲ್ಲಿದೆ. ಇದಲ್ಲದೇ, ವಾರ್ಷಿಕವಾಗಿ 15,550 ಪೇಟೆಂಟ್ ಅರ್ಜಿಗಳನ್ನು ಸಲ್ಲಿಸಲಾಗುತ್ತಿದ್ದು, ಅದರಲ್ಲಿ ಕರ್ನಾಟಕದ ಕೊಡುಗೆ 2,022 ರಷ್ಟಿದೆ (AISHE, MHRD, GOI, 2019, DST, MoST, GOI, 2020).

ರಾಜ್ಯದಲ್ಲಿ ಇಂತಹ ಅಂಕಿ ಅಂಶಗಳನ್ನು ಹೆಚ್ಚಿನ ವಿವರಗಳೊಂದಿಗೆ ಸಂಗ್ರಹಿಸಬೇಕಾಗಿದ್ದು, ಕರ್ನಾಟಕದ ಪ್ರಸಕ್ತ ಚಿತ್ರಣವನ್ನು ಗಮನಿಸಿದರೆ ಜ್ಞಾನಾಧಾರಿತ ಆರ್ಥಿಕತೆಯಲ್ಲಿ ಮುಂದಾಳತ್ವವನ್ನು ಪಡೆದುಕೊಳ್ಳಲಿದೆ. ಆದರೆ, ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ಡಿಜಿಟಲ್ ಅಂತರ ಬಹಳಷ್ಟಿರುವುದನ್ನು ಗಮನಿಸಬೇಕಾಗಿದೆ. ವಿಶ್ವದ ಆರ್ಥಿಕತೆಯಲ್ಲಿ ಎಲ್ಲಾ ಸ್ಥರಗಳಲ್ಲೂ ಬಹಳ ಬದಲಾವಣೆಗಳಾಗುತ್ತಿದ್ದು, ಇತ್ತೀಚೆಗೆ ಅನಾವರಣಗೊಂಡ ರಾಷ್ಟ್ರೀಯ ಶಿಕ್ಷಣ ನೀತಿ – 2020ರ ಮೂಲಕ ಭಾರತವು ಯುವ ಸಬಲೀಕರಣಕ್ಕೆ ಎದುರು ನೋಡುತ್ತಿದೆ. **"21ನೇ ಶತಮಾನದಲ್ಲಿ ಜಾಗತಿಕ ಪ್ರಸ್ತುತತೆಯೊಂದಿಗೆ ಕೌಶಲ್ಯ ಅಭಿವೃದ್ಧಿ"** ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ. ಆದಕಾರಣ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು 2030ನ್ನು ದೃಷ್ಟಿಯಲ್ಲಿಟ್ಟುಕೊಂಡು ಸುಸ್ಥಿರ ಅಭಿವೃದ್ಧಿ ಗುರಿಗಳೊಂದಿಗೆ ಸಮನ್ವಯವಾಗುವಂತೆ ಒಂದು ಧ್ಯೇಯ ದೃಷ್ಟಿಯನ್ನು (Vision) ರಚಿಸುವ ಅಗತ್ಯವಿದೆ.

ಸಾಮರ್ಥ್ಯ ಮತ್ತು ಅವಕಾಶಗಳು

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಕರ್ನಾಟಕ ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ, ಸಾಮರ್ಥ್ಯ ವೃದ್ಧಿ ಮತ್ತು ಉದ್ಯಮಶೀಲತೆಗೆ ನೋಡಲ್ ಕೇಂದ್ರವಾಗಿ ಕಾರ್ಯನಿರ್ವಹಿಸಲು ಸ್ಥಾಪಿಸಲಾಗಿದೆ. ಶೈಕ್ಷಣಿಕ ಕ್ಷೇತ್ರದ ಭಾಗವಹಿಸುವಿಕೆ, ರಾಜ್ಯವ್ಯಾಪಿ ಹರವು, ವೈವಿಧ್ಯಮಯ ಪಾಲುದಾರಿಕೆ ಹಾಗೂ ಸರ್ಕಾರಿ ಸಂಸ್ಥೆಗಳೊಂದಿಗೆ ಮತ್ತು ಬಾಧ್ಯಸ್ಥರೊಂದಿಗೆ ಕ್ರಿಯಾತ್ಮಕ ಸಂಬಂಧ, ಇವು ಅಕಾಡೆಮಿಯ ಬಲವಾಗಿವೆ.

ಆರ್ಥಿಕತೆಯ ಎಲ್ಲಾ ರಂಗಗಳಲ್ಲೂ ಬಹಳಷ್ಟು ಪ್ರಗತಿಯನ್ನು ಸಾಧಿಸಿದರೂ ಸಹ

ವಿಜ್ಞಾನ ಮತ್ತು ತಂತ್ರಜ್ಞಾನ ಉಪಕರಣಗಳ ಬಳಕೆ ಮತ್ತು ಮಹತ್ವವನ್ನು ತಿಳಿದುಕೊಳ್ಳುವುದರಲ್ಲಿ ಬಹಳಷ್ಟು ಜ್ಞಾನದ ಅಂತರವಿದ್ದು, ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಜಾಗತಿಕ ಗುಣಮಟ್ಟವನ್ನು ಸಾಧಿಸುವ ಅವಶ್ಯವಿದೆ. ಈ ನಿಟ್ಟಿನಲ್ಲಿ ಕೃಷಿ, ಆರೋಗ್ಯ, ಶಿಕ್ಷಣ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (MSME) ಕೆಲವು ಉದಾಹರಣೆಗಳಾಗಿವೆ. ಸಮರ್ಥ ವಿಜ್ಞಾನ ಸಂವಹನಕಾರರು, ಗ್ರಾಮೀಣ ಭಾಗಗಳಲ್ಲಿ ವಿಜ್ಞಾನ ಬೋಧನೆ, ತಂತ್ರಜ್ಞಾನ ಆಧಾರಿತ ಉದ್ಯಮಗಳಲ್ಲಿ ಕೌಶಲ್ಯ, ವೃತ್ತಿಪರರುಗಳಿಗೆ ತಮ್ಮ ಕೌಶಲ್ಯವನ್ನು ಉತ್ತಮಪಡಿಸಿಕೊಳ್ಳಲು ಕೌಶಲ ಶಾಲೆಗಳು ಇತ್ಯಾದಿಗಳಲ್ಲಿ ಕೊರತೆ ಇರುವುದು ಸ್ಪಷ್ಟವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಉಪಕರಣಗಳ ಮೂಲಕ ಮಹಿಳಾ ಸಬಲೀಕರಣ ಮತ್ತು ಕರ್ನಾಟಕದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಬೇಕಾಗಿದೆ.

ಇದೇ ಸಮಯದಲ್ಲಿ ಭಾರತೀಯ ವಿಜ್ಞಾನಿಗಳು, ಅದರಲ್ಲೂ ನಿರ್ದಿಷ್ಟವಾಗಿ ಕನ್ನಡಿಗ ವಿಜ್ಞಾನಿಗಳು ರಾಜ್ಯದ ವಿದ್ಯಾರ್ಥಿಗಳು ಮತ್ತು ಯುವಕರೊಂದಿಗೆ ತಮ್ಮ ಪರಿಣತಿ ಮತ್ತು ಅನುಭವವನ್ನು ಹಂಚಿಕೊಳ್ಳಲು ಉತ್ಸುಕರಾಗಿರುವುದು ಒಂದು ಸಂತಸಕರ ವಿಷಯವಾಗಿದೆ. ಇದರಿಂದ ಅಕಾಡೆಮಿಗೆ ಅವಕಾಶ ಮತ್ತು ಹೆಚ್ಚಿನ ವ್ಯಾಪ್ತಿ ದೊರೆತು ಸಂಪರ್ಕವನ್ನು ಸಾಧಿಸಲು ಹಾಗೂ ಪ್ರೌಢಶಾಲೆಗಳು & ಕಾಲೇಜುಗಳು, ವಿಶ್ವವಿದ್ಯಾಲಯಗಳು & ಸಂಶೋಧನಾ ಸಂಸ್ಥೆಗಳು ಹಾಗೂ ಕೃಷಿ–ಕೈಗಾರಿಕೆಗಳು ಒಟ್ಟಿಗೆ ಸೇರಿದಂತೆ ವಿಜ್ಞಾನ ಸಾಕ್ಷರತೆಯನ್ನು ಹೆಚ್ಚಿಸಲು ಮತ್ತು ಸಮಾಜದಲ್ಲಿ ವೈಜ್ಞಾನಿಕ ಉಪಕರಣಗಳು ಮತ್ತು ತಂತ್ರಗಳನ್ನು ಬಳಸಲು ಅನುವಾಗುವುದು.

ವಿಷನ್ (ಧ್ಯೇಯ ದೃಷ್ಟಿ)

'ಸರ್ವರ ಬದುಕಿಗಾಗಿ ಜ್ಞಾನ–ವಿಜ್ಞಾನ–ತಂತ್ರಜ್ಞಾನದ ಬೆಳಕು'

ಮಿಷನ್ (ಸಾಧನಾ ತಂತ್ರ)

ಸಮಾಜದ ಕಲ್ಯಾಣಕ್ಕಾಗಿ ವಿಜ್ಞಾನ ಪ್ರೋತ್ಸಾಹ, ತಂತ್ರಜ್ಞಾನ ಪ್ರಸರಣ ಮತ್ತು ಆವಿಷ್ಕಾರಗಳನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರವನ್ನು ಈ ಕೆಳಕಂಡ ಅಂಶಗಳ ಮೂಲಕ ವಹಿಸುವುದು:

1. ವಿಜ್ಞಾನವು ಬಾಹ್ಯವಾದುದಲ್ಲ, ಸಹಜವಾದುದೆಂದು ಬಾಧ್ಯಸ್ಥರೆಲ್ಲರೂ ಗೌರವಿಸಿ, ಸಮಾಜದ ಎಲ್ಲಾ ಸ್ತರಗಳಿಂದಲೂ ಸ್ವಾಭಾವಿಕವೆಂಬ ಭಾವನೆಯನ್ನು ಮೂಡಿಸಬೇಕಾಗಿದೆ
2. ಗ್ರಾಮೀಣ ಕರ್ನಾಟಕದಲ್ಲಿ ವೈಜ್ಞಾನಿಕ ಸಾಕ್ಷರತೆ ಮತ್ತು ತಂತ್ರಜ್ಞಾನ ಸಾಮರ್ಥ್ಯಗಳು

3. ದೈನಂದಿನ ಜೀವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಯೋಜನಗಳ ಪ್ರಾಥಮಿಕ ಅನುಭವವನ್ನು ಪಡೆಯಲು ಅನುವು ಮಾಡಿಕೊಡುವುದು
4. ರಾಜ್ಯದಲ್ಲಿನ ಅಸಾಧಾರಣ ಸಾಂಸ್ಥಿಕ ಮತ್ತು ಮಾನವ ಸಂಪನ್ಮೂಲವನ್ನು ಸಂಯೋಜಿಸುವುದು
5. ಸಂಶೋಧನಾ ಪ್ರಕಟಣೆಗಳು ಮತ್ತು ಸಾರ್ವಜನಿಕ ಸರಕುಗಳು ಸೇರಿದಂತೆ ವಿಜ್ಞಾನದಲ್ಲಿ ರಾಜ್ಯಕ್ಕೆ ಮುಂದಾಳತ್ವದ ಪಾತ್ರವನ್ನು ಸಕ್ರಿಯಗೊಳಿಸುವುದು
6. ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರ ಆಧಾರಿತ ವಿನೂತನ ಉದ್ಯಮಗಳು ಮತ್ತು ಸಹಭಾಗಿತ್ವವನ್ನು ಸ್ಥಾಪಿಸುವುದು
7. ಅಂತರ ಶಾಸ್ತ್ರೀಯ ಒಕ್ಕೂಟ ಮತ್ತು ಜಾಲಬಂಧವನ್ನು ಏರ್ಪಡಿಸುವುದು
8. ಸಾರ್ವಜನಿಕ ಮತ್ತು ಸಾಂಸ್ಥಿಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಕಾರ್ಯ ನೀತಿಯನ್ನು ಸೂಚಿಸುವುದು

ಲಕ್ಷ್ಯ

"ಸಾಮಾಜಿಕ ಒಳಿತಿಗಾಗಿ ವಿಜ್ಞಾನ–ತಂತ್ರಜ್ಞಾನ–ಆವಿಷ್ಕಾರ" ಎಂಬ ಧ್ಯೇಯವನ್ನು ಸಾಕಾರಗೊಳಿಸಲು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಕೆಳಕಂಡ ಅಂಶಗಳಿಗೆ ಲಕ್ಷ್ಯ ನೀಡಲಿದೆ:

1. ವಿಜ್ಞಾನ ಸಂವಹನದ ಮೂಲಕ, ವಿಶೇಷವಾಗಿ ಕನ್ನಡದಲ್ಲಿ, ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು
2. ಶಿಕ್ಷಣ-ಕೃಷಿ-ಉದ್ಯಮ ಸಂಪರ್ಕದ ಮೂಲಕ, ಗ್ರಾಮೀಣ ಪ್ರದೇಶವನ್ನು ಕೇಂದ್ರೀಕರಿಸಿ, ತಂತ್ರಜ್ಞಾನ ಪ್ರಸರಣಕ್ಕೆ ಅವಕಾಶ ಕಲ್ಪಿಸುವುದು
3. ಸಾಮಾಜಿಕ ಒಳಿತಿಗಾಗಿ ನಾವೀನ್ಯತೆ/ಆವಿಷ್ಕಾರ ಮತ್ತು ಉದ್ಯಮಶೀಲತೆಯನ್ನು ಬೆಳೆಸುವುದು
4. ಪ್ರಶಸ್ತಿಗಳನ್ನು ನೀಡುವ ಮೂಲಕ ಪ್ರತಿಭೆ ಹಾಗೂ ಕೊಡುಗೆಗಳನ್ನು ಗುರುತಿಸುವುದು
5. ಸಮ್ಮೇಳನ ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು
6. ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳಲ್ಲಿ ಕೌಶಲ್ಯಾಭಿವೃದ್ಧಿಗೆ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು
7. ರಾಜ್ಯಕ್ಕೆ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ/ಆವಿಷ್ಕಾರ ನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು

ಕಾರ್ಯತಂತ್ರ

ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಪ್ರಮುಖ ಕ್ಷೇತ್ರಗಳಾದ ಕೃಷಿ, ಆರೋಗ್ಯ, ಕೈಗಾರಿಕೆ, ಶಿಕ್ಷಣ, ಸಂವಹನ, ಸಾರಿಗೆ ಮತ್ತು ಇತರೆ ಸಂಬಂಧಿತ ವಲಯಗಳ ಅಭಿವೃದ್ಧಿಗೆ ಅವಶ್ಯಕವಾಗಿದೆ. ಆವಿಷ್ಕಾರ, ಒಳಹರಿವು ಮತ್ತು ಬಂಡವಾಳ ಹೂಡಿಕೆಯು ಗುಣಕ ಪರಿಣಾವನ್ನು ಬೀರಲಿದ್ದು, ಉದಾಹರಣೆಗೆ ರಾಜ್ಯವು ಮಾಹಿತಿ ತಂತ್ರಜ್ಞಾನ & ಜೈವಿಕ ತಂತ್ರಜ್ಞಾನ ಉದ್ಯಮಗಳಿಗೆ, ಬಾಹ್ಯಾಕಾಶ ಸಂಶೋಧನಾ ಪ್ರಯತ್ನಗಳಿಗೆ ಹಾಗೂ ಇತರ ರಾಜ್ಯಗಳ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಪ್ರಮುಖ ಶೈಕ್ಷಣಿಕ ತಾಣವಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿಯು ಹೊಸ ಪರಿಕಲ್ಪನೆಯ ಜನನಕ್ಕೆ ಮತ್ತು ಅದರ ಅನ್ವಯಕ್ಕೆ ಒಂದು ಚಲನಾ ಶಕ್ತಿಯಾಗಿದ್ದು, ಸರ್ಕಾರ ಮತ್ತು ಕಾರ್ಪೋರೇಟ್ ವಲಯಗಳೆರಡರಲ್ಲೂ ಕಾರ್ಯನೀತಿ ಅಗತ್ಯತೆಗಳನ್ನು ಪೂರೈಸಲು ನಿರಂತರವಾಗಿ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಇದೇ ಸಮಯದಲ್ಲಿ ರಾಜ್ಯದ ಸಾಂಸ್ಕೃತಿಕ ಗುಣವಿಶೇಷಗಳು ಸಂದರ್ಭೋಚಿತವಾಗಿ ಮಾಲಿಕತ್ವ ಮತ್ತು ಬೆಳವಣಿಗೆಗೆ ಅಗತ್ಯವಾಗಿದೆ.

ಸವಾಲುಗಳು ಮತ್ತು ಅವುಗಳಿಗೆ ಅನುಗುಣವಾಗಿ ಅಕಾಡೆಮಿಯ ಕ್ರಮಗಳು:

1. ಕರ್ನಾಟಕದಲ್ಲಿ ಶೈಕ್ಷಣಿಕ ಸಾಕ್ಷರತೆ ಮತ್ತು ವಿಜ್ಞಾನ ಸಾಕ್ಷರತೆಯ ವಿವರ ಪಡೆಯುವುದು
2. ಅಂತರ್ ವಿಭಾಗೀಯ ಕಲಿಕೆ; ಶಿಕ್ಷಣ–ಉದ್ಯಮಗಳ ನಡುವೆ ಸಮರ್ಪಕ ಸಂವಾದ
3. ವಿಜ್ಞಾನ ಸಂವಹನ ಮತ್ತು ವಿಜ್ಞಾನದಲ್ಲಿ ಉತ್ಕೃಷ್ಟತೆ
4. ಸಂಸ್ಥೆಗಳ ಅಂತರ್ಗತ ಸಾಮರ್ಥ್ಯವನ್ನು ಬಳಸಿಕೊಳ್ಳಲು ಒಕ್ಕೂಟ ವಿಧಾನವನ್ನು ಅನುಸರಿಸುವುದು
5. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ವಿಜ್ಞಾನವನ್ನು ತಾವೇ ಮಾಡಿ ಕಲಿಯಲು ಅನುವು ಮಾಡಿಕೊಡಲು ಪ್ರಾದೇಶಿಕ ಕಾರ್ಯಾಗಾರಗಳು ಮತ್ತು ಸಂವಾದಗಳನ್ನು ಏರ್ಪಡಿಸುವುದು
6. ಮಹಿಳಾ ಸಬಲೀಕರಣ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಉಪಕರಣಗಳನ್ನು ಬಳಸಿಕೊಂಡು ಕರ್ನಾಟಕದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸುವುದು
7. ಮೂಲ ಮತ್ತು ಅನ್ವಯಿಕ ವಿಜ್ಞಾನಗಳನ್ನು ಹೊಸ ವಿಜ್ಞಾನಗಳಲ್ಲದೇ, ಜಾನಪದ ವಿಜ್ಞಾನದೊಂದಿಗೆ ಸಂಯೋಜಿಸುವ ಪರಿಕಲ್ಪನೆಗಳು

8. ಜೀವನೋಪಾಯಕ್ಕೆ ಅನುವಾಗಲು ಅನೌಪಚಾರಿಕ ಆವಿಷ್ಕಾರಗಳನ್ನು ಗುರುತಿಸುವುದು
9. ಆವಿಷ್ಕಾರಗಳು ಮತ್ತು ಉದ್ಯಮಶೀಲತೆಯ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸುವುದು
10. ವಿಜ್ಞಾನದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಮತ್ತು ಸಾರ್ವಜನಿಕರು ವಿಜ್ಞಾನದ ಮಾಹಿತಿಯನ್ನು ಹೆಚ್ಚಾಗಿ ಪಡೆಯಲು ಅನುವುವಾಗುವಂತೆ ವಿಜ್ಞಾನ ಸಂವಹನವನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸಮರ್ಥವಾಗಿ ಅಗತ್ಯತೆಗೆ ತಕ್ಕಂತೆ ಬಳಸುವುದು.
11. ವಿಜ್ಞಾನ ಮತ್ತು ತಂತ್ರಜ್ಞಾನ ಬಂಡವಾಳ ಹೂಡಿಕೆ ಮತ್ತು ಪ್ರತಿಫಲದ ಪರಿಣಾಮ ಮೌಲ್ಯಮಾಪನ ಅಧ್ಯಯನವನ್ನು ಕೈಗೊಂಡು, ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಅನುವು ಮಾಡಿಕೊಡುವುದು.
12. ವೈಜ್ಞಾನಿಕ ಅರಿವನ್ನು ಮೂಡಿಸಲು ಜಿಲ್ಲಾ ಮಟ್ಟದಲ್ಲಿ ಮಾರ್ಗದರ್ಶಕರು ಮತ್ತು ತರಬೇತಿ ಪಡೆದ ಯುವ ಪಡೆಯನ್ನು ಸಜ್ಜುಗೊಳಿಸುವುದು
13. ನಾಯಕತ್ವ ಒಳಗೊಂಡಂತೆ ವಿವಿಧ ಹಂತಗಳಲ್ಲಿ ಸಾಮರ್ಥ್ಯವನ್ನು ವೃದ್ಧಿಗೊಳಿಸುವುದು
14. ಸಬಲೀಕರಣಗೊಂಡ ಕರ್ನಾಟಕಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ

ಕಾರ್ಯಯೋಜನೆ

ಮೇಲ್ಕಂಡ ಅಂಶಗಳನ್ನು ಅನುಷ್ಠಾನಗೊಳಿಸಲು, ಕಾರ್ಯಯೋಜನೆ ಕೆಳಕಂಡಂತಿದೆ:

1. ಕರ್ನಾಟಕ ಮೂಲದ ವ್ಯಕ್ತಿಗಳು ವಿಶ್ವದ ಯಾವುದೇ ಸ್ಥಳದಲ್ಲಿದ್ದರೂ, ಅವರೊಡನೆ ರಾಜ್ಯದ ಸಂಸ್ಥೆಗಳು ಸಂಪರ್ಕ ಸಾಧಿಸಲು ಅನುವಾಗುವಂತೆ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳ ಜಾಲಬಂಧದ ವೇದಿಕೆಗಳನ್ನು ಭೌತಿಕ ಮತ್ತು ವರ್ಚುಯಲ್ ಎರಡರಲ್ಲೂ ಸ್ಥಾಪಿಸುವುದು.
2. ಉತ್ಕೃಷ್ಟ ಕೇಂದ್ರಗಳನ್ನು ವಿಜ್ಞಾನ ಸಾಕ್ಷರತೆ ಮತ್ತು ಸಂವಹನ; ಭೌಗೋಳಿಕ ಮಾಹಿತಿ ವ್ಯವಸ್ಥೆ ಅನ್ವಯಿಕಗಳು; ಪರಿಸರ ಪರಿಣಾಮ ಮೌಲ್ಯಮಾಪನ& ನಿರ್ವಹಣೆ; ಬೌದ್ಧಿಕ ಆಸ್ತಿ ವ್ಯವಸ್ಥೆ ನಿರ್ವಹಣೆ; ಯೋಜನಾ ನಿರ್ವಹಣೆ ಕ್ಷೇತ್ರಗಳಲ್ಲಿ ಸ್ಥಾಪಿಸುವುದು.
3. ವಿಷಯ ಸೃಜನಾ ಉನ್ನತ ಕೇಂದ್ರ ಮತ್ತು ವಿಜ್ಞಾನ ವೀಡಿಯೋಗಳನ್ನು ಕನ್ನಡದಲ್ಲಿ ಉತ್ಪಾದಿಸುವುದು
4. ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಮಾರ್ಗದರ್ಶಿ ಕೇಂದ್ರದಲ್ಲಿ ವೃತ್ತಿಪರ ಉನ್ನತಿಗೆ ಅಲ್ಪಾವಧಿ ತರಬೇತಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು

ಮುಂಚೂಣಿ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪಾಲುದಾರಿಕೆಗಳೊಂದಿಗೆ ಆಯೋಜನೆ

5. ವಿಜ್ಞಾನ ಆಧಾರಿತ ಉದ್ಯಮಗಳು ಮತ್ತು ತಂತ್ರಜ್ಞಾನ ಆಧಾರಿತ ಗ್ರಾಮೀಣ ಉದ್ಯಮಗಳಿಗೆ ಇನ್ಕ್ಯುಬೇಟರ್‌ಗಳ ಸ್ಥಾಪನೆ
6. ದೂರದೃಷ್ಟಿತ್ವ, ನಾವಿನ್ಯತೆ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳಿಗೆ ಸಾರ್ವಜನಿಕ ನೀತಿ ಕೇಂದ್ರ
7. ವೈಯುಕ್ತಿಕ ಮತ್ತು ಸಾಂಸ್ಥಿಕ ಹಾಗೂ ಸಾರ್ವಜನಿಕ ಮತ್ತು ಕಾರ್ಪೊರೇಟ್‌ಗಳು ಸೇರಿದಂತೆ ಕರ್ನಾಟಕದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳಿಗೆ ಸಂಬಂಧಿಸಿದ ಪ್ರಯತ್ನಗಳ ಭಂಡಾರವಾಗಲಿದೆ
8. ರಾಜ್ಯದಲ್ಲಿ ವಿಜ್ಞಾನ ಪ್ರತಿಭೆಗಳ ಗುರುತಿಸುವಿಕೆ ಮತ್ತು ಪ್ರಕಟಣಾ ಕೇಂದ್ರ

ಉಪಸಂಹಾರ

ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳು ಕ್ರಿಯಾತ್ಮಕವಾಗಿ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿವೆ ಎಂಬುದನ್ನು ಮನಗಂಡು ಜನಸಾಮಾನ್ಯರು ಮೆಚ್ಚುವಂತಾಗಲು ವಿಷಯ ಮತ್ತು ಪ್ರಸ್ತುತಿ ಎರಡನ್ನೂ ಪುನರ್ ವಿಮರ್ಶಿಸಿ, ಸಾಧನೆ ಮತ್ತು ಸವಾಲುಗಳನ್ನು ನಿರಂತರವಾಗಿ ಉನ್ನತೀಕರಿಸುವುದು ಅಗತ್ಯವಾಗಿದೆ. ರಾಜ್ಯಾದ್ಯಂತ ಸಹ ಭಾಗೀದಾರರಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನದ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳಲು ಅನುವಾಗುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಚೌಕಟ್ಟಿನಲ್ಲಿರುವ ಹಲವಾರು ಶೈಕ್ಷಣಿಕ ಸಂಸ್ಥೆಗಳು ಕ್ರಿಯಾತ್ಮಕವಾಗಿ ಭಾಗಿಯಾಗಬೇಕಾಗಿದೆ. ರಾಜ್ಯದಲ್ಲಿ ಯುವ ಜನತೆಯನ್ನು ಅರ್ಥಪೂರ್ಣ ರೀತಿಯಲ್ಲಿ ತಲುಪಲು ಅನುವಾಗುವಂತೆ ಮುಂಬರುವ ದಶಕಗಳಲ್ಲಿ ಹಲವಾರು ಪ್ರಯತ್ನಗಳನ್ನು ಒಟ್ಟಿಗೆ ಸಮನ್ವಯಗೊಳಿಸುವುದು ಅವಶ್ಯಕವಾಗಿದೆ. ಆರ್ಥಿಕತೆಯ ಎಲ್ಲಾ ಕ್ಷೇತ್ರಗಳೂ ಸೇರಿದಂತೆ ನೈಜ ಜ್ಞಾನ ಆರ್ಥಿಕತೆ ಎನಿಸಿಕೊಳ್ಳಬೇಕೆಂದರೆ ವೈಜ್ಞಾನಿಕ ಮನೋಭಾವನೆ ಮತ್ತು ಉದ್ಯಮಶೀಲತೆಯನ್ನು ಹೆಚ್ಚಿಸಿ,"ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಸಬಲೀಕರಣಗೊಂಡ ಕರ್ನಾಟಕವಾಗಲು" ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ರಾಜ್ಯದ ಅಪೆಕ್ಸ್ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ.

ಆಯ್ದ ಆಕರ ಗ್ರಂಥಗಳು

Indian National Science Academy, 2010. A Draft Vision Document for Indian Science, INSA, New Delhi, 15 pp.

Ministry of Science and Technology, Government of India, 2013. Science, Technology and Innovation Policy, 2013, 16 pp.

Office of the Chief Scientist 2013, Science, Technology, Engineering and Mathematics in the National Interest: A Strategic Approach, Australian Government, Canberra, 36 pp.

Innovation and Science Australia 2017, Australia2030: prosperity through innovation, AustralianGovernment, Canberra, 125 pp.

Department of Higher Education, MHRD, GoI, 2019. All India Survey on Higher Education, 2018-19. 310 pp.

Department of Science and Technology, MoST, GoI, 2020. S&T Indicators Tables: Research and Development Statistics, 2019-20, 62 pp.

Planning, Programme Monitoring and Statistics Department, Government of Karnataka, 2020. Economic Survey of Karnataka, 2019-20, 966 pp.

Ministry of Human Resource Development, 2020, National Education Policy, 66 pp.